PAPERS LAID ON THE TABLE

SRI K. H. PATIL (Hon. Minister for Revenue and Labour).—Sir, before we proceed with your permission I lay Notification No RD 163 ESR 90 regarding exemption of stamp duty to Khadi and village Industries.

MR. SPEAKER.—Paper laid.

ಹಿಳಿನೇ ನಿಯಮದ ಮೇರೆಗೆ

೧) ರಕ್ಷಣಾ ಪಡೆಗಳಲ್ಲಿ ಉದ್ಯೋಗಿಗಳಾಗಿರುವವರ ಮಕ್ಕಳಿಗೆ ವೃತ್ತಿ ಶಿಕ್ಷಣ ಕಾಲೇಜುಗಳಲ್ಲಿ ಪ್ರವೇಶಕ್ಕಿದ್ದ ವಿಶೇಷ ಸವಲತ್ತು ಮುಂದಾ ಮಾಡಿರುವ ಕುರಿತು

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ಈ ರಾಜ್ಯದ ಪ್ರಜೆಗಳಾಗಿದ್ದು ರಕ್ಷಣಾ ಪಡೆಗಳಲ್ಲಿ ಉದ್ಯೋಗಿಗಳಾಗಿರುವವರು ಅನೇಕ ಮುಂದಿ ರಾತ್ರಿ, ಹಗಲು, ಮಳೆ–ಬಿಸಿಲು, ಹಿಮ–ಧೂಮ್ಯ, ಗಾಳಿ–ಜಿಳಿಗಳನ್ನು ಲೆಕ್ಕಿಸದೇ ಜೀವದ ಹಂಗು ತೊರೆದು ದುಡಿಯುತ್ತಿರುವ ಈ ಉದ್ಯೋಗಿಗಳ ಮಕ್ಕಳಿಗೆ ರಾಜ್ಯದಲ್ಲಿ ೫ ವರ್ಷ ಶಿಕ್ಷಣ ಪಡೆಯುದಿದ್ದರೂ, ಮೆಡಿಕಲ್ ಇಂಜಿನಿಯರಿಂಗ್ ಇತ್ಯಾದಿ ವೃತ್ತಿಶಿಕ್ಷಣ ಕಾಲೇಜುಗಳಲ್ಲಿ ಸೀಟು ದೊರಕುತ್ತಿದ್ದುದು, ರಾಜ್ಯಪಾಲರ ಆಡಳಿತದ ಕಾಲದಲ್ಲಾದ ಬದಲಾವಣೆಯಿಂದ ತಪ್ಪಿಹೋಗಿದೆ. ಅರ್ಹತೆಯಂ ಅಂಕ ಗಳಿಸಿದವರಿಗೂ ಈಗ ಸೀಟು ಲಭ್ಯವಿಲ್ಲ. ಈ ಅನ್ಯಾಯವನ್ನು ಸರಿಪಡಿಸಬೇಕು, ಅವಶ್ಯವಿದ್ದಲ್ಲಿ ವಿಶೇಷ ವಿಂಸಲಾತಿ ಸೌಲಭ್ಯ ಕಲ್ಪಿಸಬೇಕು ಎಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿನ ಇಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳ ಮತ್ತು ಪಾಲಿಟೆಕ್ನಿಕ್‌ಗಳ ಪ್ರವೇಶ ನಿಯಮಾವಳಿಗಳ ಪ್ರಕಾರ ಈ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅಭ್ಯರ್ಥಿಯು ಕರ್ನಾಟಕದಲ್ಲಿನ ಅಂಗೀಕೃತ ಶಾಲೆಯಲ್ಲಿ ಕೊನೆಯ ಪಕ್ಷ ೫ ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕೆಂಬ ನಿಯಮ ಇದೆ. ಈ ನಿಯಮ ರಕ್ಷಣಾ ಪಡೆಯಂ ಸೇವೆಯಲ್ಲಿರುವ ಉದ್ಯೋಗಿಗಳಿಗೆ ಅನ್ವಯಿಸುವುದಿಲ್ಲ. ಕರ್ನಾಟಕ ರಾಜ್ಯದವರಾಗಿದ್ದು, ಯಾವುದೇ ರಾಜ್ಯದಲ್ಲಿ ರಕ್ಷಣಾ ಸೇವೆಯಲ್ಲಿ ಉದ್ಯೋಗದಲ್ಲಿರುವವರ ಮಕ್ಕಳಿಗೆ ರಾಜ್ಯದಲ್ಲಿ ಕನಿಷ್ಟ ಐದು ವರ್ಷ ವ್ಯಾಸಂಗ ಮಾಡಿರಬೇಕೆಂಬ ನಿಯಮ ಅನ್ವಯಿಸುವುದಿಲ್ಲ. ಇವರಿಗಾಗಿ ೫೫ ಸ್ಥಾನಗಳನ್ನು ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಹಾಗೂ ಪಾಲಿಟೆಕ್ನಿಕ್‌ಗಳಲ್ಲಿ ೭೬ ಸ್ಥಾನಗಳನ್ನು ಮೀಸಲಿಡಲಾಗಿದೆ. ರಕ್ಷಣಾ ಪಡೆಯ ಸೇವೆಯಲ್ಲಿರುವ ಹೊರ ರಾಜ್ಯದ ಉದ್ಯೋಗಿಗಳು, ಆಯಾಯ ಶೈಕ್ಷಣಿಕ ವರ್ಷ ಪ್ರಾರಂಭವಾಗುವ ಮುಂಚೆ ಒಂದು ವರ್ಷ ನಿರಂತರವಾಗಿ ಕರ್ನಾಟಕ ರಾಜ್ಯದಲ್ಲಿ ಸೇವೆ ಸಲ್ಲಿಸಿದ್ದರೆ, ಅಂಥವರ ಮಕ್ಕಳು ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹತೆ ಪಡೆದಿರುತ್ತಾರೆ.

ಈ ರೀತಿಯ ಸೌಲಭ್ಯಗಳು ಇದ್ದು ಇದನ್ನು ರಾಜ್ಯಪಾಲರ ಆಡಳಿತದಲ್ಲಿ ತೆಗೆದು ಹಾಕಲಾಗಿದೆ ಎಂಬ ದೂರು ನಿಜವಲ್ಲ.

೨) ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಯೋಗಶಾಲ ಸಹಾಯಕರಿಗೆ ಮುಂಬಡ್ತಿ.

ಶ್ರೀ ರಾಮಲಿಂಗರೆಡ್ಡಿ.—ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಯೋಗ ಶಾಲಾ ಸಹಾಯಕರು ೨೦–೨೫ ವರ್ಷಗಳಿಂದ ಸರ್ಕಾರಿ ಸೇವೆ ಸಲ್ಲಿಸುತ್ತಾ, ಇದ್ದ ಮೇಲ್ದರ್ಜೆಯ ಮತ್ತು ಕೆಳದರ್ಜೆಯ ನೌಕರರು ಇವರಿಗೆಲ್ಲ ಮುಂಬಡ್ತಿಯ ಸದಾವಕಾಶವಿದ್ದು, ಇವರನ್ನು ಕೇಳುವವರಿಲ್ಲವಾಗಿದೆ. ಈ ಹಿಂದೆ ನಿರ್ದೇಶಕರಿಗೆ ಮತ್ತು ಸರ್ಕಾರಕ್ಕೆ ಬಿಡ್ತಿ ವಿಚಾರವಾಗಿ ಮನವಿ ಸಲ್ಲಿಸಿದ್ದು, ಇದಕ್ಕೆ ನಿರ್ದೇಶಕರಿಂದ ಸಿ ಅಂಡ್ ಆರ್ ರೂಲ್ಸ್‌ನಲ್ಲಿ ಅವಕಾಶವಿಲ್ಲವೆಂದು ತಿಳಿಸಿರುತ್ತಾರೆ. ಇದೆ ರೀತಿ ಮುಂಬಡ್ತಿ ಇಲ್ಲದೇ ಸೇವೆ ಸಲ್ಲಿಸಬೇಕೇ? ಕೃಷಿ ಇಲಾಖೆ ಒಂದನ್ನು ಬಿಟ್ಟು ಬೇರೆ ಎಲ್ಲಾ ಇಲಾಖೆಗಳಲ್ಲಿ ಪ್ರಯೋಗ ಶಾಲಾ ಸಹಾಯಕರ ಹುದ್ದೆಗೆ ಮುಂಬಡ್ತಿ ಅವಕಾಶವಿರುತ್ತದೆ. ಕೃಷಿ ಇಲಾಖೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೇವಲ ೫೪ ಮಂದಿ ಇರುತ್ತಾರೆ. ಇವರಿಗೆ ಮುಂಬಡ್ತಿ